ಕರ್ನಾಟಕ ಸರ್ಕಾರ

ಮಾರ್ಚ್ 7, 2017

# ಜನಸಾಮಾನ್ಯರಿಗೂ ರಾಜ್ಯ ಸರ್ಕಾರದ ಉತ್ತರದಾಯಿತ್ವ ಪ್ರತಿಬಿಂಬ ಮುಖ್ಯಮಂತ್ರಿಯವರ ಮಾಹಿತಿ ಮಂಡಲ ವೇದಿಕೆ ಲೋಕಾರ್ಪಣೆ



**ಬೆಂಗಳೂರು, ಮಾರ್ಚ್ 7:**

ಜನ ಸಾಮಾನ್ಯರ ಆಶೋತ್ತರಗಳಿಗೆ ಉತ್ತರದಾಯಿತ್ವವಾಗಿ ಹಾಗೂ ಸ್ಪಂದನಾಶೀಲ ಆಡಳಿತದ ಪ್ರತಿರೂಪವಾಗಿ ರೂಪಿಸಿರುವ ರಾಜ್ಯ ಸರ್ಕಾರದ ಪ್ರತಿಬಿಂಬ ಮುಖ್ಯಮಂತ್ರಿಯವರ ಮಾಹಿತಿ ಮಂಡಲ ವೇದಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಇಂದು ಲೋಕಾರ್ಪಣೆ ಮಾಡಿದರು.

ಚುನಾವಣೆಗಳಲ್ಲಿ ಆಯ್ಕೆಯಾಗುವ ಮುನ್ನ, ಚುನಾವಣಾ ಪೂರ್ವದಲ್ಲಿ ಪಕ್ಷದ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವತ್ತ ಹಾಗೂ ನಂತರ ಆಯವ್ಯಯಗಳಲ್ಲಿ ಮಾಡಿದ ಘೋಷಣೆಗಳನ್ನು ಸಾಕಾರಗೊಳಿಸುತ್ತಿರುವತ್ತ ಒಳ ಹಾಗೂ ಹೊರನೋಟಗಳನ್ನು ಪ್ರತಿಬಿಂಬ ಪ್ರತಿಬಿಂಬಿಸಲಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ಹಾಗೂ ಬೆಳವಣಿಗೆಯತ್ತ ಸರ್ಕಾರ ಕಾರ್ಯನಿರ್ವಹಿಸಲು ಪಾರದರ್ಶಕತೆ ಮತ್ತು ಜನರ ನಿರೀಕ್ಷೆಗೆ ತಕ್ಕಂತೆ ಸ್ಪಂದನಾಶೀಲ ಆಡಳಿತ ಕೊಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳನ್ನು ಪ್ರತಿಬಿಂಬ ಪ್ರತಿಧ್ವನಿಸಲಿದೆ. ಪ್ರತಿವರ್ಷ ಆಯವ್ಯಯದಲ್ಲಿ ಪ್ರಕಟಿಸಿರುವ ಯೋಜನೆಗಳು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಿರುವ ಅನುದಾನ, ವೆಚ್ಚದ ವಿವರ, ಭೌತಿಕ ಹಾಗೂ ಆರ್ಥಿಕ ಅನುಪಾಲನೆಗಳನ್ನು ಜನರ ಮುಂದಿಡುವುದೇ ಈ ಪ್ರತಿಬಿಂಬದ ಸದಾಶಯವಾಗಿದೆ ಎಂದು ಸಿದ್ದರಾಮಯ್ಯ ಅವರು ವಿವರಿಸಿದರು.

ಇಡೀ ರಾಷ್ಟ್ರದಲ್ಲೇ ಪ್ರತಿಬಿಂಬದ ವೇದಿಕೆಯ ಮೂಲಕ ಜನತೆಗೆ ಸ್ವಯಂ ಪ್ರೇರಿತವಾಗಿ ಮಾಹಿತಿ ಒದಗಿಸುತ್ತಿರುವ ಎರಡನೇ ರಾಜ್ಯ ಸರ್ಕಾರ ನಮ್ಮ ಕರ್ನಾಟಕವಾಗಿದೆ. ಎಲ್ಲಾ ಇಲಾಖೆಗಳ ಪ್ರಮುಖ ಯೋಜನೆಗಳ ಪ್ರಗತಿ ವಿವರಗಳನ್ನು ಪ್ರತಿಬಿಂಬದಲ್ಲಿ ಪ್ರತಿ ತಿಂಗಳು ದಾಖಲಿಸಲಾಗುತ್ತದೆ.

ಮುಂದಿನ ದಿನಗಳಲ್ಲಿ ದ್ವಿತೀಯ ಅವತರಣಿಕೆಯಲ್ಲಿ ಈ ವೇದಿಕೆಯನ್ನು ಜಿಲ್ಲಾವಾರು ಅಂಕಿ–ಅಂಶಗಳನ್ನು ಅಡಕಗೊಳಿಸಿ ಮತ್ತಷ್ಟು ವಿಸ್ತರಿಸಲಾಗುತ್ತದೆ ಎಂದು ಅವರು ಹೇಳಿದರು.

ರಾಜ್ಯದ ಜನತೆ ಪ್ರತಿಬಿಂಬದ ಮೂಲಕ ರಾಜ್ಯ ಸರ್ಕಾರದ ನಡೆಯನ್ನು ಗಮನಿಸಲು ಸಾಧ್ಯವಾಗುತ್ತದೆ. ಮೊಬೈಲ್ ಒನ್ ಯೋಜನೆಯಲ್ಲಿ ಕರ್ನಾಟಕ ರಾಜ್ಯವು ದೇಶಕ್ಕೆ ಮೊದಲ ಸ್ಥಾನದಲ್ಲಿರುವುದನ್ನು ಇಲ್ಲಿ ಗಮನಿಸಬಹುದು ಎಂದೂ ಸಿದ್ದರಾಮಯ್ಯ ಅವರು ಮಾಹಿತಿ ನೀಡಿದರು.

ಈ ಮುನ್ನ ಪ್ರಾಸ್ತಾವಿಕ ಭಾಷಣ ಮಾಡಿದ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ–2 ತುಷಾರ್ ಗಿರಿನಾಥ್ ಅವರು ಪ್ರತಿಬಿಂಬದ ಬಹುಮುಖ್ಯ ಉಪಯೋಗ ಎಂದರೆ ಆಡಳಿತವನ್ನು ಪರಿಣಾಮಕಾರಿಯಾಗಿ, ಪ್ರಬಲವಾಗಿ, ಪಾರದರ್ಶಕವಾಗಿ ಹಾಗೂ ಪ್ರಾಮಾಣಿಕವಾಗಿ ನಡೆಸಲು ಸಹಾಯ ಮಾಡುವಂತಹ ಹಲವಾರು ಆಡಳಿತ–ಸ್ನೇಹಿ ಸೇವೆಗಳನ್ನು ಸರ್ಕಾರವು ಜನತೆಯ ಮುಂದಿಡುವುದಾಗಿದೆ ಎಂದು ಬಣ್ಣಿಸಿದರು.

ಪ್ರಾತ್ಯಕ್ಷಿತೆ ಸಹಿತ ಪ್ರತಿಬಿಂಬ ಮಾಹಿತಿ ಮಂಡಲದ ವೇದಿಕೆಯನ್ನು ಪರಿಚಯಿಸಿದ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ–1 ಎಲ್. ಕೆ. ಅತೀಕ್ ಅವರು ರಾಜ್ಯದ ಸಮಗ್ರ ಪ್ರಗತಿಯ ಹೆಜ್ಜೆ ಗುರುತುಗಳನ್ನು ದಾಖಲಿಸುವ ತಾಣವೇ ಪ್ರತಿಬಿಂಬ. ಸಾಮಾಜಿಕ ನ್ಯಾಯದೆಡೆಗೆ ರಾಜ್ಯ ಸರ್ಕಾರಕ್ಕೆ ಇರುವ ಬದ್ದತೆ, ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಈ ತಾಣ ಹೊಂದಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಎಲ್ಲಾ ಪ್ರಮುಖ ಕಾರ್ಯಕ್ರಮಗಳ ಅನುಷ್ಠಾನದ ಮಾಹಿತಿ, ಇಲಾಖೆಗಳ ಕಾರ್ಯಚಟುವಟಿಕೆಗಳು ಹಾಗೂ ನೀತಿ ನಿರೂಪಣೆಗಳನ್ನು ಈ ಮಾಹಿತಿ ಮಂಡಲ ಹೊಂದಿದೆ. ಇದರಲ್ಲಿರುವ ಎಲ್ಲಾ ಅಂಕಿ–ಅಂಶಗಳನ್ನು ಪ್ರತೀ ತಿಂಗಳ ಹತ್ತನೇ ತಾರೀಖಿನೊಳಗೆ ತಾಜಾಗೊಳಿಸುವ ಗುರಿ ಹೊಂದಲಾಗಿದೆ ಎಂದರು.

ಕಂದಾಯ ಸಚಿವ ಕಾಗೋಡು ತಿಮ್ಮಪ್ಪ, ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ಸಚಿವ ಟಿ. ಬಿ. ಜಯಚಂದ್ರ, ಅರಣ್ಯ ಸಚಿವ ಬಿ. ರಮಾನಾಥ್ ರೈ, ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ, ಮೀನುಗಾರಿಕಾ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಪ್ರಮೋದ್ ಮಧ್ವರಾಜ್ ಹಾಗೂ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು ಈ ಸಮಾರಂಭದಲ್ಲಿ ಹಾಜರಿದ್ದರು. ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ ಗುತ್ತಿ ಜಂಬುನಾಥ್ ಅವರು ಕಾರ್ಯಕ್ರಮ ನಿರೂಪಿಸಿದರು.

**"ಮುಖ್ಯಮಂತ್ರಿಗಳ ಆನ್ ಲೈನ್ ಮಾಹಿತಿ ಕೊಶ" ಪ್ರತಿಬಿಂಬ ಅಂತರ್ಜಾಲ ತಾಣದ ಲಿಂಕ್ ಇಲ್ಲಿದೆ"**

**https://pratibimba.karnataka.gov.in**

***********